**<u>ಸಾಕ್ಷಿಯನ್ನು ದಿಃ 18.03.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯವಿಚಾರಣೆ: ಪ್ರಾಜ್ಞಾ ಹಿ.ಸ.ಸ.ಅ ರವರಿಂದಃ-</u>**

ದಿನಾಂಕಃ25.02.2013 ರಂದು ಆರೋಪಿಯು ಎರಡು ನಿವೇಶನಗಳ ಸಂಬಂಧ ಒಂದು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಅದನ್ನು ನಿಪಿ-1 ಎಂದು ಗುರ್ತಿಸಲಾಯಿತು. ದಿಃ31.08.2016 ರಂದು ನಿವೇಶನಗಳ ಸಂಖ್ಯೆ ಬದಲಿಸಿ ಮತ್ತೊಂದು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಸದರಿ ಕ್ರಯದ ಕರಾರು ಪ್ರತಿಯನ್ನು ಸಾಕ್ಷಿದಾರರು ನೋಡಿ ಗುರ್ತಿಸಿದ್ದು ಅದನ್ನು ನಿಪಿ-2 ಎಂದು ಗುರ್ತಿಸಲಾಯಿತು. ನನ್ನ ಬ್ಯಾಂಕಿನಿಂದ ಹಣ ವರ್ಗಾವಣೆ ಆಗಿರುವ ಬಗ್ಗೆ ಬ್ಯಾಂಕ್ ಸ್ಟೇಟ್ ಮೆಂಟ್ ಅನ್ನು ಹಾಜರುಪಡಿಸಿರುತ್ತೇನೆ. ಸಿಟಿ ಬ್ಯಾಂಕ್ ಸ್ಟೇಟ್ ಮೆಂಟ್ ಅನ್ನು ನಿಪಿ-3 ಎಂದು, ಐಡಿಬಿಐ ಬ್ಯಾಂಕ್ ಸ್ಟೇಟ್ ಮೆಂಟ್ ಅನ್ನು ನಿಪಿ-4 ಎಂದು ಗುರ್ತಿಸಲಾಯಿತು. ಎರಡು ಬ್ಯಾಂಕ್ ಗಳಿಂದ ಒಟ್ಟು 19 ಲಕ್ಷದ 50 ಸಾವಿರ ರೂಗಳನ್ನು ಆರೋಪಿಯ ಬ್ಯಾಂಕಿಗೆ ವರ್ಗಾವಣೆ ಮಾಡಿರುತ್ತೇನೆ. 50 ಸಾವಿರ ರೂಗಳನ್ನು ನಗದಾಗಿ ಆರೋಪಿಗೆ ಕೊಟ್ಟಿರುತ್ತೇನೆ. ಒಟ್ಟು 20 ಲಕ್ಷ ರೂಗಳನ್ನು ನಾನು ಆರೋಪಿಗೆ ನಿವೇಶನಗಳ ಬಾಬ್ತು ಕ್ರಯದ ಪ್ರತಿಫಲ ಕೊಟ್ಟಿರುತ್ತೇನೆ.

ಸುಮಾರು 02 ವರ್ಷಗಳು ಕಳೆದರು ಆರೋಪಿಯು ಕ್ರಯಪತ್ರವನ್ನು ನೊಂದಣಿ ಮಾಡಿಕೊಟ್ಟಿರುವುದಿಲ್ಲ. ಆ ನಂತರ ನಾನು ನನ್ನ ಹಣವನ್ನು ವಾಪಸ್ಸು ಕೊಡುವಂತೆ ಕೇಳಿರುತ್ತೇನೆ. ದಿಃ27.06.2015 ರಂದು ಆರೋಪಿಯು 20 ಲಕ್ಷ ಮೌಲ್ಯದ ಒಂದು ಚೆಕ್ ಅನ್ನು ನನಗೆ ಕೊಟ್ಟಿರುತ್ತಾರೆ. ಸದರಿ ಚೆಕ್ ಅನ್ನು ನಾನು ಆರೋಪಿಯ ಮಾಹಿತಿಯಂತೆ ದಿಃ30.07.2015 ರಂದು ನಗದೀಕರಣಕ್ಕೆ ಸಲ್ಲಿಸಿರುತ್ತೇನೆ. ಸದರಿ ಚೆಕ್ ನಗದೀಕರಣವಾಗದೇ ಆರೋಪಿ ಖಾತೆಯಲ್ಲಿ ಸಾಕಷ್ಟು ಹಣವಿರುವುದಿಲ್ಲವೆಂದು ವಾಪಸ್ಸು ಬಂದಿರುತ್ತದೆ. ಚೆಕ್ ಮತ್ತು ಬ್ಯಾಂಕ್ ಹಿಂಬರಹದ ಪ್ರತಿಗಳನ್ನು ಸಾಕ್ಷಿದಾರರು ನೋಡಿ ಗುರ್ತಿಸಿದ್ದು ಅವುಗಳನ್ನು ನಿಪಿ-5 ಮತ್ತು 6 ಎಂದು ಗುರ್ತಿಸಲಾಯಿತು.

ಆನಂತರ ಚೆಕ್ ಬೌನ್ಸ್ ಆಗಿರುವ ಬಗ್ಗೆ ಜೈಪುರದ ನ್ಯಾಯಾಯದಲ್ಲಿ ಆರೋಪಿಯ ವಿರುದ್ದ ಪ್ರಕರಣ ಹೂಡಿದ್ದು ಅದು ಚಾಲ್ತಿಯಲ್ಲಿರುತ್ತದೆ. ಆರೋಪಿಯು ನನಗೆ ನಿವೇಶನಗಳನ್ನು ಒಪ್ಪಿಕೊಂಡಂತೆ ನೊಂದಣಿ ಮಾಡಿಕೊಟ್ಟಿರುವುದಿಲ್ಲ ಅಥವಾ ನನ್ನ ಹಣವನ್ನು ಸಹ ವಾಪಸ್ಸು ಕೊಟ್ಟಿರುವುದಿಲ್ಲ. ಆರೋಪಿ ನೀಡಿದ ಚೆಕ್ ಬೌನ್ಸ್ ಆಗಿರುತ್ತದೆ. ಆರೋಪಿ ವಿರುದ್ದ ದಿಃ16.11.2015 ರಂದು ಯಲಹಂಕ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿರುತ್ತೇನೆ. ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದಾರರು ಗುರ್ತಿಸಿದ್ದು ಅದನ್ನು ನಿಪಿ-7 ಎಂದು ಹಾಗೂ ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-7ಎ ಎಂದು ಗುರ್ತಿಸಲಾಯಿತು.

ದಿನಾಂಕಃ17.11.2015 ರಂದು ಬೆಳಿಗ್ಗೆ 10.30 ರಿಂದ 11.15 ರವರೆಗೆ ನನ್ನ ಸಮಕ್ಷಮ ಆರೋಪಿಗೆ ಸಂಬಂಧಪಟ್ಟ ಕೂರ್ಲಪ್ಪ ಕಾಂಪ್ಲೆಕ್ಸ್ ನಲ್ಲಿ ನನ್ನ ಸಮಕ್ಷಮ ಸ್ಥಳ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ಸಾಕ್ಷಿದಾರರು ನೋಡಿ ಗುರ್ತಿಸಿದ್ದು ಅದನ್ನು ನಿಪಿ-8 ಎಂದು ಗುರ್ತಿಸಲಾಯಿತು. ಸದರಿ ಪಂಚನಾಮೆಗೆ ಚಾಸಾ-2 ಮತ್ತು 3 ರವರು ಪಂಚಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ.

ಆರೋಪಿಯು ದಿನಾಂಕಃ27.06.2015 ರಂದು 20 ಲಕ್ಷ ರೂ ಹಣ ಮತ್ತು 30 ಇಂಟು 40 ಅಡಿ ಒಂದು ನಿವೇಶನವನ್ನು ಕೊಡುವುದಾಗಿ ಒಪ್ಪಿ ರಶೀದಿ ಬರೆದುಕೊಟ್ಟಿದ್ದರು. ಸದರಿ ರಶೀದಿ ಪ್ರತಿಯನ್ನು ಸಾಕ್ಷಿದಾರರು ನೋಡಿ ಗುರ್ತಿಸಿದ್ದು ಅದನ್ನು ನಿಪಿ-9 ಎಂದು ಗುರ್ತಿಸಲಾಯಿತು. ಆರೋಪಿಯು ಸದರಿ ರಶೀದಿಯ ಒಪ್ಪಂದದಂತೆ ನಡೆದುಕೊಳ್ಳದೇ ನನಗೆ ಮೋಸ ಮಾಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎನ್.ಡಿ.ಆರ್.ವಕೀಲರಿಂದಃ**

ಸಮಯಕೋರಿದ್ದರಿಂದ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**